ಇ) ಈ ಯೋಜನೆ ಜಾರಿಗೆ ಬಂದಾಗಿನಿಂದ ಡಿಸೆಂಬರ್ 1996ರ ಅಂತ್ಯದವರೆಗೆ ರೂ.1323.03 ಲಕ್ಷ ಗಳನ್ನು ಖರ್ಚು ಮಾಡಲಾಗಿದೆ.

ಹೊಸ ಸಕ್ಕರೆ ಕಾರ್ಖಾನೆಗಳ ಬಗ್ಗೆ

420(661) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ ಮಂಜೂರಾಗಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಎಷ್ಟು? ಅವು ಯಾವುವು?

ಆ) ಅವುಗಳನ್ನು ಪ್ರಾರಂಭಿಸಲು ಇರುವ ಷರತ್ತುಗಳು ಯಾವುವು?

ಇ) ರಾಜ್ಯ ಸರ್ಕಾರ ಇವುಗಳಿಗೆ ಕೊಡಬೇಕಾದ ಸಹಾಯಕ ಏನು?

ಈ) ಇನ್ನೂ ಕೇಂದ್ರ ಸರ್ಕಾರದ ಮಂಜೂರಾತಿಗೆ ಕಾದಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಯಾವುವು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು)

ಅ) ಹತ್ತು ವಿವರ ಕೆಳಕಂಡಂತಿದೆ.-

1. ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ, ಹಳ್ಳಾಳ
2. ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ, ಖಾನಪು,
3. ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ, ಇಮಾಂಪುರ,
4. ಮಹಾತ್ಮ ಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ, ಭಾಲ್ಕಿ,
5. ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ, ಇಂಡಿ,
6. ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ಮುಧೋಳ,
7. ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ, ಕಾಕತಿ,
8. ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ಬೈಲಹೊಂಗಲ
9. ಧನಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ, ಖಾನಪೇಟೆ, ರಾಮದುರ್ಗ,
10. ನರಗುಂದ ಸಹಕಾರಿ ಸಕ್ಕರೆ ಕಾರ್ಖಾನೆ, ಕುನ್ನೂರ್, ನರಗುಂದ.

ಆ) ಭಾರತ ಸರ್ಕಾರ ನೀಡುವ ಅನುಮತಿ ಪತ್ರದ ಪ್ರಕಾರ ಅನುಮತಿಯ 3 ವರ್ಷದ ವರೆಗೆ ಸಿಂಧುವಿದ್ದು, ನಂತರ ವಿಸ್ತರಿಸಿಕೊಳ್ಳಲು ಅವಕಾಶವಿದೆ. ನಿವೇಶನವು ಪರಿಸರ ದೃಷ್ಟಿಯಿಂದ

ಮಾನ್ಯತೆ ಹೊಂದಿರುವ ಬಗ್ಗೆ ಪರಿಸರ ಮತ್ತು ಮಾಲಿನ್ಯ ಇಲಾಖೆಯಿಂದ ಖಾತರಿ ಪಡೆಯಬೇಕು. ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾಲಿನ್ಯ ನಿಯಂತ್ರಣದ ಬಗ್ಗೆ ದೃಢೀಕರಣ ಪತ್ರ ಪಡೆಯಬೇಕು. ಕಾರ್ಖಾನೆಯ ನಿರ್ಮಾಣಕ್ಕೆ ಯಂತ್ರೋಪಕರಣ ಸರಬರಾಜು ಮಾಡುವ ಗುತ್ತಿಗೆ ಕೆಲಸದ ಆದೇಶವನ್ನು ಹಣಕಾಸು ಸಂಸ್ಥೆಗಳಿಂದ ಅವಧಿ ಸಾಲ ಮಂಜೂರಾತಿ ಖಾತರಿ ದೊರೆತ ಮೇಲೆ ನೀಡಬೇಕು. ಯೋಜನಾ ವೆಚ್ಚವನ್ನು ಈ ಕೆಳಕಂಡಂತೆ ಭರಿಸಬೇಕು.

1. ಸದಸ್ಯರ ವಂತಿಗೆ - ಯೋಜನಾವೆಚ್ಚದ ಶೇ. 10ರಷ್ಟು
2. ರಾಜ್ಯ ಸರ್ಕಾರದ ಶೇರು ವಂತಿಗೆ - ಯೋಜನಾ ವೆಚ್ಚದ ಶೇ. 30ರಷ್ಟು
3. ಹಣಕಾಸು ಸಂಸ್ಥೆಗಳಿಂದ - ಯೋಜನಾ ವೆಚ್ಚದ ಶೇ. 60ರಷ್ಟು

ಇ) ಸದಸ್ಯರಿಂದ ಶೇರು ಬಂಡವಾಳದ ಪೂರ್ಣ ಹಣ ಸಂಗ್ರಹಣೆ ಆದ ನಂತರ ರಾಜ್ಯ ಸರ್ಕಾರವು ತನ್ನಪಾಲಿನ ಶೇ. 30 ಶೇರು ಹಣ ಬಿಡುಗಡೆ ಮಾಡುವುದು.

ಈ) ವಿವರ ಈ ಕೆಳಕಂಡಂತಿದೆ.-

1. ಬಸವೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ಕಿರಿಗೆರೆ, ಧಾರವಾಡ ಜಿಲ್ಲೆ
2. ಮೈಡಗಿರಿ, ಸಸಕಾ, ಗಂಗಾಪುರ, ಧಾರವಾಡ ಜಿಲ್ಲೆ,
3. ಪಾರ್ಮರ್ಸ್ ಕೊಆಪರೇಟಿವ್ ಶುಗರ್ ಫ್ಯಾಕ್ಟರಿ ಗಂಗೀಭಾವಿ, ಧಾರವಾಡ ಜಿಲ್ಲೆ.

ಹಿರೇಕೆರೂರು ಪಟ್ಟಣದಲ್ಲಿ ಕೈಗಾರಿಕಾ ಶೆಡ್ಡುಗಳ ನಿರ್ಮಾಣ

421(658) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು).- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಪಟ್ಟಣದಲ್ಲಿ ಸಣ್ಣ ಕೈಗಾರಿಕಾ ಇಲಾಖೆಯಿಂದ ಕಟ್ಟುತ್ತಿರುವ ಶೆಡ್ಡುಗಳು ಇನ್ನೂ ಪೂರ್ತಿ ಆಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಬಿ.ಎ. ಮೊಯಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು)

ಅ) ಹೌದು.

ಆ) ಇನ್ನು 4, 5 ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು.

ರೇಷ್ಮೆ ಪ್ರದರ್ಶಕರ ನೇಮಕಾತಿ

422(655) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು).- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?